**NOVEMBER 8,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ವಿಕಸಿತ ಭಾರತ – 2047ರ, ಅಮೃತಕಾಲದ ಪಯಣದಲ್ಲಿ**, ದೇಶದ ಆರ್ಥಿಕತೆ ವೃದ್ಧಿಗೆ, ಮಹಿಳೆಯರ ಕೊಡುಗೆ ಮಹತ್ವದ್ದು ಎಂದು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ಸಚಿವ, ಪಿಯೂಷ್ ಗೋಯಲ್ ಹೇಳಿದ್ದಾರೆ. ದೇಶಾದ್ಯಂತ ಮಹಿಳೆಯರಿಗೆ ತರಬೇತಿ ನೀಡಿ, ಆರ್ಥಿಕ ಸಹಕಾರ ಒದಗಿಸಿ, ಉದ್ಯಮಶೀಲರನ್ನಾಗಿಸುತ್ತಿರುವ, 'ಗೋಲ್ಡಮನ್ ಸ್ಯಾಕ್ಸ್' ಆಯೋಜಿಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರು ಮಾತನಾಡಿದರು. 2023 ರಲ್ಲಿ, ಗೋಲ್ಡಮನ್ ಸ್ಯಾಕ್ಸ್ ಸಂಸ್ಥೆ, ಬೆಂಗಳೂರಿನ ಐ.ಐ.ಎಂ. ಸಂಸ್ಥೆ ಹಾಗೂ ಹೈದರಾಬಾದಿನ ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್ ಸಹಯೋಗದಲ್ಲಿ, 10 ಸಾವಿರ ಮಹಿಳೆಯರ ಆರ್ಥಿಕ ಪ್ರಗತಿ ಗುರಿಯೊಂದಿಗೆ, ಕಾರ್ಯಕ್ರಮ ಜಾರಿಗೊಳಿಸಿದೆ ಎಂದು ಸಚಿವರು ತಿಳಿಸಿದರು. ಮಹಿಳೆಯರು ಎಲ್ಲ ಅಡೆತಡೆಗಳನ್ನು ಎದುರಿಸಿ, ಇತರರನ್ನು ಸಬಲೀಕರಿಸುವ ಶಕ್ತಿ ಹೊಂದಿದ್ದಾರೆ. ಹಣಕಾಸು ಖಾಸಗಿ ಸಂಸ್ಥೆ ಈಗಾಗಲೇ, 3 ಸಾವಿರದ 500 ಜನ ಮಹಿಳೆಯರಿಗೆ, ಉದ್ಯಮಶೀಲತೆ ತರಬೇತಿ ನೀಡಿದೆ. ಒಟ್ಟು 10 ಸಾವಿರ ಮಹಿಳೆಯರಿಗೆ ತರಬೇತಿ ನೀಡುವ ಗುರಿ ಹೊಂದಿದೆ ಎಂದು, ಸಚಿವರು ಶ್ಲಾಘಿಸಿದರು.

<><><>

**2. ತೋಟಗಾರಿಕೆ ಮಹಾವಿದ್ಯಾಲಯಗಳ**, 15ನೇ ಯುವ ಜನೋತ್ಸವ – 'ಕಲಾ ಬಿದರಿ ಸಂಗಮ–2024'ಕ್ಕೆ, ಬೀದರ ತೋಟಗಾರಿಕೆ ಮಹಾವಿದ್ಯಾಲಯ ಆತಿಥ್ಯ ವಹಿಸಿದೆ. ಬೀದರಿನ, ಡಾಕ್ಟರ್ ಚನ್ನಬಸವ ಪಟ್ಟದ್ದೇವರು ಮಂದಿರದಲ್ಲಿ ಆಯೋಜಿತ ಉತ್ಸವಕ್ಕೆ, ಜಾನಪದ ಕಲಾವಿದ ಗುರುರಾಜ ಹೊಸಕೋಟೆ ಚಾಲನೆ ನೀಡಿದರು. ಪ್ರಥಮ ದಿನದ ಸಾಂಸ್ಕೃತಿಕ ದಿರಿಸು ತೊಟ್ಟ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಕೊಪ್ಪಳ ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗಳ ತಂಡಕ್ಕೆ ಪ್ರಥಮ ಸ್ಥಾನ, ಶಿರಸಿ ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗಳ ತಂಡಕ್ಕೆ ದ್ವಿತೀಯ ಬಹುಮಾನ ಹಾಗೂ ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ತಂಡಕ್ಕೆ, ತೃತೀಯ ಪುರಸ್ಕಾರ ಲಭಿಸಿತು. ಒಟ್ಟು ಒಂಬತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ, ಮೂರುನೂರು ವಿದ್ಯಾರ್ಥಿಗಳು, ಯುವ ಜನೋತ್ಸವದಲ್ಲಿ, ಪ್ರತಿಭಾ ಪ್ರದರ್ಶನ ಮಾಡಲಿದ್ದಾರೆ.

<><><>

**3. ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ** ಸಂಘಟನೆಯಲ್ಲಿ, ಸ್ವಯಂಸೇವಕರಾಗಿ ಕೊಪ್ಪಳ ಜಿಲ್ಲೆಯ ವಿದ್ಯಾರ್ಥಿಗಳ ಸೇರ್ಪಡೆಗೆ ಒತ್ತು ನೀಡುವುದಾಗಿ, ಜಿಲ್ಲಾಧಿಕಾರಿ ನಲಿನ್ ಅತುಲ್ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.ಸೇವಾ ಮನೋಭಾವ, ಶಿಸ್ತು, ಸಮಯ ಪಾಲನೆಯನ್ನು ಕಲಿಸುವ, ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ, ಜಿಲ್ಲೆಯಲ್ಲಿ ಹೆಚ್ಚಾಗಬೇಕು. ಕೊಪ್ಪಳ ಜಿಲ್ಲೆಯ ಶಾಲೆ ಮತ್ತು ಕಾಲೇಜುಗಳಲ್ಲಿ, ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಸ್ಥಾಪಿಸಿ, ನಿಯಮಿತವಾಗಿ ಶಿಬಿರಗಳನ್ನು, ಆಯೋಜಿಸುವಂತೆ ಅವರು ಸಲಹೆ ನೀಡಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಾಪನಾ ಧ್ವಜ ದಿನಾಚರಣೆ ನಿಮಿತ್ತ, ಧ್ವಜ ಚೀಟಿಗಳನ್ನು ಜಿಲ್ಲಾಧಿಕಾರಿ ನಲಿನ್ ಅತುಲ್ ಬಿಡುಗಡೆ ಮಾಡಿದರು.

<><><>

**4. ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕಿನ ಕೊರ್ತಿ** ಗ್ರಾಮದ ನಿವಾಸಿ, ಗಂಗವ್ವ ಬಿರಾದಾರ ಅವರು, ಗೃಹಲಕ್ಷ್ಮೀ ಯೋಜನೆಯ 12 ತಿಂಗಳ ಕಂತು, 24 ಸಾವಿರ ರೂಪಾಯಿ ಕೂಡಿಟ್ಟು, ಹೊಲಿಗೆ ಯಂತ್ರ ಖರೀದಿಸಿ, ತನ್ನ ಮಕ್ಕಳಿಗೆ ಹೊಲಿಗೆ ತರಬೇತಿ ನೀಡುತ್ತಿದ್ದಾರೆ. ಹೆಣ್ಣು ಮಕ್ಕಳ ಬದುಕಿನ ಹಾದಿ ರೂಪಿಸಿರುವ, ಗಂಗವ್ವ ಅವರ ನಡೆ ಮಾದರಿ ಹಾಗೂ ಇತರರಿಗೆ ಪ್ರಶಂಸನೀಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದ ಮೂಲಕ, ಅಭಿನಂದಿಸಿದ್ದಾರೆ. ಇದು ತಮ್ಮ ರಾಜಕೀಯ ಬದುಕಿನ ಸಾರ್ಥಕದ ಕ್ಷಣವಾಗಿದ್ದು, ಖಾತ್ರಿ ಯೋಜನೆಯ ಸದ್ಬಳಕೆಗೆ ಸಿಕ್ಕ ಗೌರವ ಎಂದಿದ್ದಾರೆ.

<><><>

**5. ರಾಜ್ಯ ಸರ್ಕಾರದ ಆದೇಶದ ಮೇರೆಗೆ, ವಕ್ಫ್ ಬೋರ್ಡ್** ನೋಟಿಸ್ ನೀಡದೆ, ರೈತರ ಪಹಣಿ ಅತಿಕ್ರಮಿಸಿದೆ. ಕಳೆದ ಎರಡು ತಿಂಗಳ ಅವಧಿಯಲ್ಲಿ, ಸಾವಿರಾರು ಕೃಷಿ ಭೂಮಿ ಹಾಗೂ ಮಠ, ಮಂದಿರದ ಆಸ್ತಿ ಕಬಳಿಸಲು ಹುನ್ನಾರ ನಡೆಸಲಾಗಿದೆ ಎಂದು, ವಕ್ಫ್ ತಿದ್ದುಪಡಿ ಕಾಯ್ದೆ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್, ಹೇಳಿದ್ದಾರೆ. ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸುದ್ದಿಗೋಷ್ಠಿ ನಡೆಸಿದ

ಅವರು, ನೂರಾರು ವರ್ಷಗಳಿಂದ ರೈತರು ಉಳುಮೆ ಮಾಡುತ್ತಿರುವ ಜಮೀನು ತನ್ನದು ಎಂದು ವಕ್ಫ್ ಬೋರ್ಡ್ ಈಗ ಹಕ್ಕು ಸಾಧಿಸುತ್ತಿದೆ. ಹುಬ್ಬಳ್ಳಿ, ಧಾರವಾಡ ಹಾಗೂ ವಿಜಯಪುರದ ರೈತರ ಪಹಣಿಯಲ್ಲಿ, ವಕ್ಫ್ ಬೋರ್ಡ್ ತನ್ನ ಹೆಸರು ಸೇರಿಸಿದೆ. ದೇಶದ ವಿವಿಧ ರಾಜ್ಯಗಳಲ್ಲಿಯೂ ಈ ರೀತಿಯ ಗೊಂದಲ ಸೃಷ್ಟಿಯಾಗಿದೆ. ಜಂಟಿ ಸಂಸದೀಯ ಸಮಿತಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ವರದಿ ಸಿದ್ಧಪಡಿಸಲಿದೆ ಎಂದು ತಿಳಿಸಿದರು.

<><><>

**6. ವರಕವಿ ಡಾಕ್ಟರ್ ದ.ರಾ.ಬೇಂದ್ರೆ ಅವರ,** 'ನಾಕುತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಸಂದು, ಇಂದಿಗೆ 50 ವರ್ಷಗಳು. ಕನ್ನಡಕ್ಕೆ ಎರಡನೇ ಜ್ಞಾನಪೀಠ ಪುರಸ್ಕಾರ ಸಂದ, ಸುವರ್ಣ ಸಂಭ್ರಮದ ಹಿನ್ನೆಲೆ, ಧಾರವಾಡ ಆಕಾಶವಾಣಿಯ ಧ್ವನಿ ಮುದ್ರಣ ಭಂಡಾರದಿಂದ, 50 ವರ್ಷಗಳ ಹಿಂದೆ, 1974ರಲ್ಲಿ ಮುದ್ರಣಗೊಂಡು, ಪ್ರಸಾರವಾದ, ಕವಿ ಬೇಂದ್ರೆ ಅವರ ಆಂಗ್ಲ ಭಾಷೆಯ ಸಂದರ್ಶನ, ಇಂದು ರಾತ್ರಿ 8 ಗಂಟೆಗೆ, ಧಾರವಾಡ ಆಕಾಶವಾಣಿಯಿಂದ, ರಾಷ್ಟ್ರ ವ್ಯಾಪಿ ಪ್ರಸಾರವಾಗಲಿದೆ. ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಡಾಕ್ಟರ್ ಶಂಕರ ಮೊಕಾಶಿ ಪುಣೇಕರ್, ಕವಿ ಬೇಂದ್ರೆ ಅವರನ್ನು ಸಂದರ್ಶಿಸಿದ, ಅಪರೂಪದ ಧ್ವನಿ ಮುದ್ರಣವನ್ನು, ಧಾರವಾಡ ಆಕಾಶವಾಣಿಯ, ಯು ಟ್ಯೂಬ್ ಚಾನೆಲ್ ಅಥವಾ ನ್ಯೂಸ್ ಆನ್ ಏರ್ ಆಪ್‌ನಲ್ಲಿ, ಆಲಿಸಬಹುದು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ**

<><><>